

ಜಪಾನ್‌ನ 'ಮಿಯೋಟೊ ಇವಾ' ತರುಣ ದಂಪತಿಗಳಿಗೆ ದಾಂಪತ್ಯದ ಸೌಂದರ್ಯವನ್ನು ಪಿಸುಗುಡುವ ತಾಣ. ಅಲ್ಲಿನ ಎರಡು ಬಂಡೆಗಳು ಗಂಡು ಹೆಣ್ಣಿನ ಸಂಕೇತ.

■ ಸಂತೋಷ್ ರಾವ್ ಪೆರ್ಮುಡ

# ದಾಂಪತ್ಯದ ಪಾಠ ಹೇಳುವ ಶಿಲಾಯುಗಳ

'ಮಿಯೋಟೊ ಇವಾ' ಅಥವಾ 'ವಿವಾಹಿತ ಕಪಲ್ ರಾಕ್ಸ್' ಜಪಾನ್‌ನ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳಲ್ಲೊಂದು. ಐಸೆ ನಗರದ ಪುಟ್ಟ ಪಟ್ಟಣವಾದ ಫುಟಾಮಿ ಬಳಿಯ ಸಮುದ್ರದಲ್ಲಿ ಇರುವ ಒಂದು ದೊಡ್ಡ ಗಾತ್ರದ ಮತ್ತು ಮತ್ತೊಂದು ಸಣ್ಣ ಗಾತ್ರದ ಎರಡು ಕಲ್ಲಿನ ರಾಶಿಗಳೇ 'ಮಿಯೋಟಾ ಇವಾ'.

ಕಿನಾರೆಯಿಂದ ಕೇವಲ 700 ಮೀ. ದೂರದಲ್ಲಿ ಸಮುದ್ರದ ನಡುವೆ ಇರುವ ಎರಡು ಕಲ್ಲುಗಳನ್ನು 'ಶಿಮೆನಾವಾ' ಎಂದು ಕರೆಯಲಾಗುತ್ತದೆ. ಭತ್ತದ ಒಣಹುಲ್ಲಿನ ಗಟ್ಟಿಯಾದ ಹಗ್ಗದಿಂದ ಕಲ್ಲುಗಳನ್ನು ಒಂದಕ್ಕೊಂದು ಬಂಧಿಸಲಾಗಿದೆ. 'ಮಿಯೋಟಾ ಇವಾ' ಪಕ್ಕದಲ್ಲೇ ಇರುವ 'ಫುಟಾಮಿ ಒಕಿತಾಮ' ದೇಗುಲದ (ಕಪ್ಪೆ ದೇವಾಲಯ) ಭಕ್ತರು, ಆ ಕಲ್ಲುಗಳನ್ನು ಪವಿತ್ರವಾದ ಕಲ್ಲುಗಳೆಂದು ಭಾವಿಸಿ ಪೂಜಿಸುತ್ತಾರೆ. ಬಂಡೆಗಳ ನಡುವೆ ಕಟ್ಟಲಾಗಿರುವ ಹಗ್ಗವು ಗಂಡು ಮತ್ತು ಹೆಣ್ಣಿನ ನಡುವೆ ಏರ್ಪಡುವ ಮದುವೆಯ ಪವಿತ್ರವಾದ ಬಂಧವನ್ನು ಸೂಚಿಸುತ್ತವೆ ಎಂದು ಅಲ್ಲಿನ ಜನರು ನಂಬುತ್ತಾರೆ.

ಕಲ್ಲುಗಳ ನಡುವೆ ಕಟ್ಟಲಾಗಿರುವ ಒಣಹುಲ್ಲಿನ ಹಗ್ಗ ಸುಮಾರು 40 ಕೇಜಿ ತೂಕವಿದೆ. ಆ ಹಗ್ಗವನ್ನು ಜಪಾನಿನ ವಿಶೇಷ ಹಬ್ಬಹರಿದಿನಗಳ ಸಂದರ್ಭದಲ್ಲಿ ವರ್ಷಕ್ಕೆ ಮೂರು ಬಾರಿ ಬದಲಾಯಿಸುತ್ತಾರೆ. ಕಲ್ಲುಗಳ ಪೈಕಿ ದೊಡ್ಡ ಬಂಡೆಕಲ್ಲನ್ನು ಗಂಡೆಂದೂ (ಗಂಡ), ಚಿಕ್ಕದನ್ನು ಹೆಣ್ಣೆಂದೂ (ಹೆಂಡತಿ) ಭಾವಿಸಲಾಗಿದ್ದು, ಅವು ಆಧ್ಯಾತ್ಮಿಕ ಮತ್ತು ಐಹಿಕ ಬದುಕಿನ ದ್ಯೋತಕವೆಂದು ಹೇಳಲಾಗುತ್ತದೆ. ಬೇಸಿಗೆಯ ಮುಂಜಾನೆಗಳಲ್ಲಿ ಸೂರ್ಯನು ಬಂಡೆಗಳ ನಡುವೆ ಉದಯಿಸುತ್ತಾನೆ, ಮತ್ತು ಬಂಡೆಗಳ ನಡುವೆ ದೂರದ 'ಫೌಜಿ ಮೌಂಟ್' ಕಾಣಿಸುತ್ತದೆ.

ಸಮುದ್ರದಲ್ಲಿ ಕಡಿಮೆ ಉಬ್ಬರವಿಳಿತ ಇದ್ದಾಗ ಮಾತ್ರ ಮಿಯೋಟೊ ಇವಾಗೆ ಭೇಟಿ ನೀಡಲು ಅವಕಾಶ ನೀಡಲಾಗುತ್ತದೆ. ಉಳಿದ ಅವಧಿಯಲ್ಲಿ ಬಂಡೆಗಳು ನೀರಿನಲ್ಲಿ ಮುಳುಗಿರುತ್ತವೆ. ಅಲ್ಲಿನ 'ಒಕಿತಾಮ' ದೇಗುಲವನ್ನು 'ಸಾರುತಾಹಿಕೊ ಅಕಾಮಿ' ಮತ್ತು ಸಾಮ್ರಾಜ್ಯಶಾಹಿ ಆಹಾರ ದೇವತೆ 'ಉಕನೊಮಿಟಾಮಾ' ಪ್ರತಿರೂಪವೆಂದು ಹೇಳಲಾಗಿದೆ. ದೇವಾಲಯದ ಸುತ್ತಲೂ ಹಲವಾರು ಕಪ್ಪೆಗಳ ಪ್ರತಿಮೆಗಳಿವೆ.



'ಮಿಯೋಟಾ ಇವಾ' ತಾಣವನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣವಾಗಿ ಗುರುತಿಸಲಾಗಿದೆ. ಆ ಬಂಡೆಗಳು ಮದುವೆ ಮತ್ತು ಸೃಷ್ಟಿಯ ಕ್ರಿಯೆಯನ್ನು ಪ್ರತಿನಿಧಿಸುವುದರಿಂದ ವಿವಾಹಿತ ದಂಪತಿಗಳು ಅಲ್ಲಿಗೆ ಹೆಚ್ಚಾಗಿ ಭೇಟಿ ನೀಡುತ್ತಾರೆ. ಆ ಪರಿಸರದ ರಮಣೀಯತೆಯನ್ನು ಹೆಚ್ಚಿಸುವಂತೆ ಕಡಲ ತೀರದಲ್ಲಿ ವಾಯುವಿಹಾರ ಮಾಡುವ ಯುವ ದಂಪತಿಗಳು ಕಾಣಿಸುತ್ತಾರೆ. ಹವಾಮಾನ ಚೆನ್ನಾಗಿದ್ದ ಸಮಯದಲ್ಲಿ ಮಿಯೋಟೊ ಇವಾ ಕಲ್ಲಿನ ಮುಂಭಾಗದಲ್ಲಿ ದಂಪತಿಗಳು ಫೋಟೋ ತೆಗೆದುಕೊಳ್ಳಲು ಸಾಲುಗಟ್ಟಿ ನಿಲ್ಲುವುದು ಅಲ್ಲಿ ಕಂಡುಬರುವ ಸಾಮಾನ್ಯ ದೃಶ್ಯವಾಗಿದೆ. ದೂರದ ಫೌಜಿ ಮೌಂಟ್ ಕೂಡ ಛಾಯಾಗ್ರಾಹಕರಿಗೆ ಹಬ್ಬದಂತೆ ಕಾಣಿಸುತ್ತದೆ.

ಅಲ್ಲಿನ ರೆಸ್ಟೋರೆಂಟ್‌ಗಳಲ್ಲಿ ಪ್ರವಾಸಿಗರು ಸ್ಥಳೀಯ ಪಾಕವೈವಿಧ್ಯವನ್ನು ಸವಿಯಬಹುದು. ವೈವಿಧ್ಯಮಯ ಕೆತ್ತನೆಯ ಸ್ಮಾರಕಗಳನ್ನು ಖರೀದಿಸಬಹುದು ಮತ್ತು 'ಐಸೆ ಸೀ ಪ್ಯಾರಡೈಸ್' ಅಕ್ವೇರಿಯಂಗೆ ಹಾಗೂ 'ಐಸೆ ಮಿಯೋಟೊ ಇವಾ ಶಾಪಿಂಗ್ ಪ್ಲಾಜಾ'ಕ್ಕೆ ಭೇಟಿ ನೀಡಬಹುದು. ಪ್ರವಾಸಿಗರಿಗೆ ಅಲ್ಲಿ ಉಳಿದುಕೊಳ್ಳಲು ವಸತಿಗೃಹದ ವ್ಯವಸ್ಥೆಯೂ ಇದೆ.

ಪ್ರತಿಕ್ರಿಯಿಸಿ: feedback@sudha.co.in